# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಬೀಜ ನಿಗಮವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು, ಇವರಿಂದ ರೂ.30.00 ಕೋಟಿ ಕ್ಯಾಷ್ ಕ್ರೆಡಿಟ್ ಸೌಲಭ್ಯ ಪಡೆಯಲು ಸರ್ಕಾರದ ರಿನ್ಯೂವಬಲ್ ಗ್ಯಾರಂಟಿ ನೀಡುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/175/ಕೃರಾಗೊ/2012 ದಿ: 28/11/2012.**

ಓದಲಾಗಿದೆ: 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ: KSSC/A&F/00607/2012-2013 Dated: 28/04/2012.

2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ: KSSC/A&F/3676/2012-2013 Dated: 30/08/2012.

3) ಕೃಷಿ ಆಯುಕ್ತರು ಏಕ ಕಡತ ಸಂಖ್ಯೆ:SFS-7/work cap Loan/Govt. Guarantee/2012-13 Dt : 30-05-2012.

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತರವರು ರೂ.50.00 ಕೋಟಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರಿಂದ ಸಾಲ ಪಡೆಯಲು ಸರ್ಕಾರದ ಖಾತರಿ ನೀಡಲು ಕೋರಿದ್ದಾರೆ.

ಮೇಲೆ ಓದಲಾದ (3)ರ ಪತ್ರದಲ್ಲಿ ಕೃಷಿ ಆಯುಕ್ತರು ಏಕ ಕಡತ ಸಂಖ್ಯೆ:SFS-7/work cap Loan/Govt. Guarantee/2012-13 ದಿ:30-05-2012ರಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮವು ರಾಜ್ಯದ ರೈತರಿಗೆ ಬೀಜಗಳನ್ನು ಪೂರೈಸುವ ಉದ್ದೇಶಕ್ಕಾಗಿ ಕಂಪನಿಗಳ ಕಾಯ್ದೆ 1956 ರಡಿಯಲ್ಲಿ ನೋಂದಾಯಿತವಾಗಿದೆ. ನಿಗಮದ ಷೇರು ಬಂಡವಾಳ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ (ರಾಷ್ಟ್ರೀಯ ಬೀಜ ನಿಗಮದ ಮೂಲಕ), ಬೀಜೋತ್ಪಾದಕರಿಂದ 35:30:35ರ ಅನುಪಾತದಲ್ಲಿ ತೊಡಗಿಸಲಾಗಿದೆ. ಅದರನ್ವಯ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಒಟ್ಟು ವಂತಿಕೆಯ ಶೇಕಡ 65% ರಷ್ಟು ಷೇರು ಬಂಡವಾಳ ತೊಡಗಿಸಿವೆ. ನಿಗಮದ ಮೆಮೋರೆಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪ್ರಕಾರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರು ನಿಗಮದ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರದಿಂದ, ಕೇಂದ್ರ ಸರ್ಕಾರದಿಂದ ಹಾಗೂ ಬೀಜೋತ್ಪಾದಕರಿಂದ ತಲಾ 4 ನಿರ್ದೇಶಕರುಗಳು ನೇಮಕಗೊಂಡು ಒಟ್ಟು 12 ನಿರ್ದೇಶಕರುಗಳಿರುತ್ತಾರೆ. ಪ್ರಸಕ್ತ ರಾಜ್ಯ ಸರ್ಕಾರದಿಂದ 4 ನಿರ್ದೇಶಕರು ನೇಮಕಗೊಂಡಿದ್ದು ಕೇಂದ್ರ ಸರ್ಕಾರದಿಂದ 3 ನಿರ್ದೇಶಕರುಗಳು ಹಾಗೂ ಬೀಜೋತ್ಪಾದಕರಿಂದ 4 ನಿರ್ದೇಶಕರುಗಳು ನೇಮಕಗೊಂಡಿರುತ್ತಾರೆ.

ರೈತರಿಗೆ ಅವಶ್ಯವುಳ್ಳ ಬೀಜಗಳನ್ನು ಉತ್ಪಾದಿಸಿ, ಒದಗಿಸುವ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ವಹಿಸಲಾಗಿದೆ. ಈ ಮೂಲಕ ಕೃಷಿ ಉತ್ಪನ್ನ ಹಾಗೂ ಉತ್ಪಾದನೆಯ ಹೆಚ್ಚಳವನ್ನು ಸಾಧಿಸಲು ಉಪಯುಕ್ತವಾಗುತ್ತದೆ.

ನಿಗಮವು ತನ್ನ ಬೀಜೋತ್ಪಾದನಾ ಕಾರ್ಯಕ್ರಮದಿಂದ ಉತ್ಕೃಷ್ಟ ತಳಿಯ ಪ್ರಮಾಣಿತ ಬೀಜಗಳನ್ನು ರಾಜ್ಯ ಬೀಜ ಪ್ರಮಾಣನ ಸಂಸ್ಥೆಯ ಗುಣ ನಿಯಂತ್ರಣದಲ್ಲಿ ಉತ್ಪಾದಿಸಿ, ರೈತ ಸಮುದಾಯಕ್ಕೆ ಪೂರೈಸಲು ಬದ್ಧವಾಗಿದೆ.

ಪ್ರಸಕ್ತ ಸಾಲಿನಲ್ಲಿ ನಿಗಮವು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ ಅನೇಕ ಸಹಾಯಧನದ ಯೋಜನೆಗಳಡಿಯಲ್ಲಿ ಅತಿ ಹೆಚ್ಚಿನ ಪ್ರಮಾಣದ ಪ್ರಮಾಣಿತ / ಗುಣಮಟ್ಟದ ಬೀಜಗಳನ್ನು ಪೂರೈಸುತ್ತಲಿದೆ.

2012-13ನೇ ಸಾಲಿನಲ್ಲಿ ನಿಗಮವು ರೂ.136.30 ಕೋಟಿಗಳ ಮೊತ್ತದ 5,42,546 ಕ್ವಿಂಟಾಲ್ ಬೀಜಗಳನ್ನು ಬೀಜೋತ್ಪಾದಕರ ಮೂಲಕ ಖರೀದಿಸಿ ರೂ.199.85 ಕೋಟಿಗಳ 5,18,355 ಕ್ವಿಂಟಾಲ್ ಪ್ರಮಾಣಿತ ಬೀಜಗಳನ್ನು ರೈತರಿಗೆ ಮಾರಾಟ ಮಾಡುವ ಯೋಜನೆಯನ್ನು ಹಾಕಿಕೊಂಡಿದೆ. ಬೀಜಗಳ ಉತ್ಪಾದನೆ, ಸಂಸ್ಕರಣೆ, ಪ್ಯಾಕಿಂಗ್ ಹಾಗೂ ವಿತರಣೆಯ ಅನೇಕ ಹಂತಗಳ ಕಾರ್ಯಗಳಿಗೆ ಅತಿ ಹೆಚ್ಚಿನ ಕಾರ್ಯ ನಿರತ ಬಂಡವಾಳದ ಅವಶ್ಯಕತೆ ಇರುತ್ತದೆ.

ಈ ಅವಶ್ಯಕ ಕಾರ್ಯ ನಿರತ ಬಂಡವಾಳ ಕ್ರೋಢೀಕರಿಸಲು ನಿಗಮವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರವರೊಂದಿಗೆ ಚರ್ಚಿಸಿ ಪ್ರಸ್ತಾವನೆಯನ್ನು ಅಂತಿಮಗೊಳಿಸಿರುತ್ತದೆ.

ಅದರನ್ವಯ ಕರ್ನಾಟಕ ರಾಜ್ಯ ಬೀಜ ನಿಗಮವು ರೂ.30.00 ಕೋಟಿಗಳ ಕ್ಯಾಷ್ ಕ್ರೆಡಿಟ್ ಸೌಲಭ್ಯವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು, ಇವರಿಂದ ಪಡೆಯಲು ಸರ್ಕಾರದ ಗ್ಯಾರಂಟಿ ಒದಗಿಸಲು ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲಾಗಿ ಷರತ್ತುಗಳೊಂದಿಗೆ ಸಚಿವ ಸಂಪುಟದ ಅನುಮೋದನೆ ಪಡೆಯಲು ಸಹಮತಿ ನೀಡಿದೆ. ಕರ್ನಾಟಕ ರಾಜ್ಯ ಬೀಜ ನಿಗಮವು SBI ಯಿಂದ ರೂ. 30 ಕೋಟಿಗಳ ಕ್ಯಾಷ್ ಕ್ರೆಡಿಟ್ ಸೌಲಭ್ಯ ಪಡೆಯಲು ಸರ್ಕಾರದ ರಿನ್ಯೂವಬಲ್ ಗ್ಯಾರಂಟಿ ನೀಡಲು ಸಚಿವ ಸಂಪುಟವು ದಿ: 06/11/2012 ರಂದು ಅನುಮೋದನೆ ನೀಡಿದೆ.

## ಆದೇಶ

ಮೇಲೆ ವಿವರಿಸಲಾದ ಕಾರಣಗಳ ಹಿನ್ನಲೆಯಲ್ಲಿ 2012-13ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಪೆಷಲೈಸ್ಡ್ ಅಗ್ರಿ ಕಮರ್ಷಿಯಲ್ ಬ್ರ್ಯಾಂಚ್, ಸೆಂಟ್ ಮಾರ್ಕ್ಸ್ ರೋಡ್, ಬೆಂಗಳೂರು, ಇವರಿಂದ ರೂ.30.00 ಕೋಟಿ (ಮೂವತ್ತು ಕೋಟಿ ರೂಪಾಯಿಗಳು ಮಾತ್ರ) ಗಳ ಕ್ಯಾಷ್ ಕ್ರೆಡಿಟ್ ಸೌಲಭ್ಯ ಪಡೆಯಲು ಸರ್ಕಾರದ ರಿನ್ಯೂವಬಲ್ ಗ್ಯಾರಂಟಿ ನೀಡಲು ಈ ಕೆಳಕಂಡ ಷರತ್ತಿನೊಂದಿಗೆ ಅನುಮತಿ ನೀಡಲಾಗಿದೆ.

- Guarantee Commission to be paid at 1% (One Percent) of Guaranteed amount.
- Escrow Mechanism to be put in place of timely servicing of credit.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ.FD/299/Exp-4/2012 ದಿನಾಂಕ 15.09.2012 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಿ.ಆರ್. ವಿಶ್ವನಾಥಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.(ಯೋಜನೆ)

ಗೆ.

1) ಮಹಾಲೇಖಪಾಲರು. (ಎ ಮತ್ತು ಇ) ಕರ್ನಾಟಕ. ಬೆಂಗಳೂರು.
2) ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ ಬೆಂಗಳೂರು.
3) ಪ್ರಧಾನ ಕಾರ್ಯದರ್ಶಿ ಆರ್ಥಿಕ ಇಲಾಖೆ. ಬೆಂಗಳೂರು.
4) ಆಯುಕ್ತರು /. ನಿರ್ದೇಶಕರು, ಕೃಷಿ ಇಲಾಖೆ. ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ. ಹೆಬ್ಬಾಳ. ಬೆಂಗಳೂರು.
6) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ. Specialized Agriculture Commercial Branch, St. Marks Road, Bangalore.
7) ಸಚಿವ ಸಂಪುಟ ಶಾಖೆ. (ಕಾರ್ಯಸೂಚಿ ಸಂಖ್ಯೆ 3. ದಿ: 06/11/2012 ಪ್ರಕರಣ ಸಂಖ್ಯೆ. ಸಿ.540/2012) ವಿಧಾನ ಸೌಧ, ಬೆಂಗಳೂರು.
8) ನಿರ್ದೇಶಕರು. ಖಜಾನೆ ಇಲಾಖೆ. (SHT), ಬೆಂಗಳೂರು.
9) ಜಂಟಿ ನಿರ್ದೇಶಕರು. ರಾಜ್ಯ ಹುಜೂರು ಖಜಾನೆ. ಬೆಂಗಳೂರು
10) ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-4 & 5. ವಿಧಾನಸೌಧ. ಬೆಂಗಳೂರು.
11) ಆಂತರಿಕ ಆರ್ಥಿಕ ಸಲಹೆಗಾರರು. ಕೃಷಿ ಮತ್ತು ತೋಟಗಾರಿಕಾ ಇಲಾಖೆ. ಬಹುಮಹಡಿ ಕಟ್ಟಡ. ಬೆಂಗಳೂರು.
12) ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.